'ಮುಂಜಾವು' ಚಂದಾ ದರ
ಆಜೀವ ಚಂದಾ ೨೦೦ ರೂ.
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೪೦ ಪೈಸೆ

ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

'ಮುಂಜಾವು' ಜಾಹೀರಾತು ದರ
(ಕಾಲಂ ಸೆಂ. ಮೀ. ಗೆ)
ಮುಖ ಪುಟದಲ್ಲಿ: ೫ ರೂ.
ಇತರ ಪುಟಗಳಲ್ಲಿ: ೪ ರೂ.

('ದೀವಟಿಗೆ' ಯಾಗಿ ಖಾಸಗಿ ಪ್ರಸಾರದಲ್ಲಿದ್ದ ಪತ್ರಿಕೆ.)
ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೭೯

ಸಂಪುಟ ೧ | ಕೊಪ್ಪ ೨೯-೮-೮೨ ಭಾನುವಾರ | ಸಂಚಿಕೆ ೪ | ಬೆಲೆ ೪೦ ಪೈಸೆ

"ಭಕ್ತಿ ಅನುಕೂಲಕ್ಕೆ ಮಾತ್ರ ಒದಗುವ ವ್ಯವಸ್ಥೆಯಲ್ಲ"
— ವೀರೇಂದ್ರ ಹೆಗ್ಗಡೆ

ಕೊಪ್ಪ: "ಭಕ್ತಿ ಎಂದರೆ ಮೂಢ ನಂಬಿಕೆಯಲ್ಲ; ಸಂದರ್ಭ ಬಂದಾಗ ಬಳಸುವ ಒಂದು ವ್ಯವಸ್ಥೆಯಲ್ಲ. ಅದು ನಿತ್ಯವೂ ಜೀವನದಲ್ಲಿ ಅಳವಡಿಸಿಕೊಂಡು ಪ್ರಯೋಜನ ಪಡೆಯುವಂಥದ್ದು."

ಹೀಗೆಂದವರು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು. ಇಲ್ಲಿನ ಪೌರ ಗಣೇಶೋತ್ಸವದಲ್ಲಿ ವಿಶೇಷ ಅತಿಥಿಯಾಗಿ ಆ. ೨೪ ರಂದು ಭಾಗವಹಿಸಿ ಮಾತನಾಡುತ್ತಾ, ಅವರು ಹೀಗೆ ಹೇಳಿದರು.

ದ್ರೌಪದಿಯ ಉದಾಹರಣೆ ಕೊಟ್ಟ ಅವರು, ಕಷ್ಟಬಂದಾಗ ಒಂದು ದಿನ ಇದ್ದಕ್ಕಿದ್ದಂತೆ ಧ್ಯಾನ ಮಾಡಿದರೆ ದೈವ ಸ್ಪರ್ಶವಾಗುವುದಿಲ್ಲ. ಆಕೆಯಂತೆ ಇಡೀ ಜೀವನದುದ್ದಕ್ಕೂ ಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು; ಹಾಗೆಯೇ, ಅಹಂಕಾರ-ಮಮಕಾರ ಬಿಟ್ಟು ದೇವರಿಗೆ ಸಂಪೂರ್ಣ ಶರಣಾಗತಿಯೂ ಸಹ ದೈವ ಸಾಕ್ಷಾತ್ಕಾರಕ್ಕೆ ಅಗತ್ಯ ಎಂದರು.

ದೈವತ್ವ-ರಾಕ್ಷಸತ್ವ

ದೈವತ್ವ, ರಾಕ್ಷಸತ್ವಗಳ ವಿವರಣೆ ನೀಡಿದ ಅವರು, "ಕಲ್ಲು, ಮರ, ನೀರು, ಪ್ರಾಣಿಗಳು-ಹೀಗೆ ಎಲ್ಲದರಲ್ಲಿ ದೈವವನ್ನು ಕಂಡ ಜನ ನಾವು. ಹಾಗೇ ಎಲ್ಲ ಮನುಷ್ಯರಲ್ಲೂ ದೈವತ್ವ ಇದೆ. ಪ್ರಪಂಚದ ಇತರ ಕಡೆಯೂ ಈ ಪರಂಪರೆಯಿದೆ. ಆದರೆ ನಮ್ಮ ಸಹಮಾನವರಲ್ಲಿ ಮಾತ್ರ ನಾವು ದೈವತ್ವವನ್ನು ಕಾಣುವುದಿಲ್ಲ. ಸಂಕುಚಿತ ದೃಷ್ಟಿಯಿಂದ ಒಬ್ಬರನ್ನೊಬ್ಬರು ನಾಶ ಮಾಡುತ್ತೇವೆ. ಅಲ್ಲಿ ನಮ್ಮಲ್ಲಿರುವ ರಾಕ್ಷಸತ್ವ ಮೇಲುಗೈ ಪಡೆಯುತ್ತದೆ. ಇದು ತುಂಬ ದುಃಖದ ಸಂಗತಿ" ಎಂದರು.

"ಮದುವೆಗೆ ಜನಸಾಮಾನ್ಯರು ವಿಪರೀತ ಖರ್ಚುಮಾಡುವುದು ಬಿಟ್ಟು ಸಾಮೂಹಿಕ ಮದುವೆಗಳು ಹೆಚ್ಚಬೇಕು. ಇದಕ್ಕೆ ಹೆಗ್ಗಡೆಯವರು ಜನರಿಗೆ ಉಪದೇಶ ಮಾಡಬೇಕು" ಎಂದು ಬಿ. ಜಿ. ಚಿದಂಬರ್ ಮಾಡಿದ್ದ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, ಈಚೆಗೆ ದೇವನಹಳ್ಳಿಯಲ್ಲಿ ತಾ. ಅ. ಮಂಡಳಿಯೇ ೨೦೧.ಜೋಡಿಗಳಿಗೆ ಮದುವೆ ಏರ್ಪಡಿಸಿದ್ದನ್ನು ಜ್ಞಾಪಿಸಿ, ಇಲ್ಲಿನ ತಾ. ಅ. ಮಂ. ಕೂಡ ಈ ದಿಕ್ಕಿನಲ್ಲಿ ಕೆಲಸ ಮಾಡಬಹುದೆಂದು ಸಲಹೆ ಮಾಡಿದರು.

ಸನ್ಮಾನ

ಈ ಬಾರಿಯ ಗಣಪತಿ ವಿಗ್ರಹವನ್ನು ಅತಿ ಸುಂದರವಾಗಿ ಮಾಡಿಕೊಟ್ಟ ಶೃಂಗೇರಿಯ ನಾರಾಯಣಾಚಾರ್ ಅವರನ್ನು ಇದೇ ಸಂದರ್ಭದಲ್ಲಿ ಹೆಗ್ಗಡೆಯವರು ಶಾಲು ಹೊದಿಸಿ ಸನ್ಮಾನಿಸಿದರು.

ಬಹಳ ದಿನಗಳ ನಂತರ ಪೂರ್ಣವಾಗಿ ಮಳೆ ಬಿಟ್ಟಿದ್ದು, ಕಿಕ್ಕಿರಿದು ಸೇರಿದ್ದ ಜನ ಸುಮಾರು ಒಂದು ಗಂಟೆ ಕಾಲ ಇತರರ ಭಾಷಣ ಕೇಳಿದ ನಂತರ ಎಂಟು ನಿಮಿಷ ಹೆಗ್ಗಡೆಯವರ ಉಪನ್ಯಾಸವನ್ನೂ ಕೇಳಿದರು.

'ಮುಂಜಾವು'ಗೆ
ಚಂದಾದಾರರಾಗಿರಿ

ಹಾಸನ ಪತ್ರಿಕಾಲಯ ಧ್ವಂಸ: ಪತ್ರಕರ್ತರ ಸಂಘದ ಖಂಡನೆ

ಚಿಕ್ಕಮಗಳೂರು : ಹಾಸನ ಜಿಲ್ಲೆಯ ಜನಪ್ರಿಯ ದಿನಪತ್ರಿಕೆ 'ಜನತಾಮಾಧ್ಯಮ'ದ ಕಚೇರಿಯ ಮೇಲೆ ಆ. ೨೪ರ ರಾತ್ರಿ ಪುಂಡರು ನುಗ್ಗಿ ಧಾಂಧಲೆ ನಡೆಸಿದ್ದನ್ನು ಚಿಕ್ಕಮಗಳೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ವಿ. ಚೂಡನಾಥಅಯ್ಯರ್ ಖಂಡಿಸಿದ್ದಾರೆ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಇಂಥ ಗಂಡಾಂತರಕಾರಿ ಪ್ರಕರಣಗಳು ಪದೇ ಪದೇ ನಡೆಯುತ್ತಿದ್ದರೂ ಸರ್ಕಾರ ಪತ್ರಕರ್ತರ ರಕ್ಷಣೆ ಬಗ್ಗೆ ಕಾಳಜಿ ವಹಿಸದಿರುವುದು ನಾಚಿಕೆಗೇಡು ಎಂದಿರುವ ಅಯ್ಯರ್, ಗುಂಡಾಗಿರಿ ನಡೆಸಿದವರು ಎಷ್ಟೇ ಪ್ರಭಾವಿಗಳಾಗಿದ್ದರೂ ಸಹ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಆ. ೨೪ರ ರಾತ್ರಿ ಕೆಲವು ಪುಂಡರು ಪತ್ರಿಕಾಲಯಕ್ಕೆ ನುಗ್ಗಿ ಅಲ್ಲಿದ್ದ ಎಲ್ಲಾ ವಸ್ತುಗಳನ್ನು ಧ್ವಂಸ ಮಾಡಿ, ಮುದ್ರಣಾಲಯದ ಸಲಕರಣೆಗಳನ್ನೆಲ್ಲಾ ಚೆಲ್ಲಾಡಿ, ಮುದ್ರಣ ಯಂತ್ರವನ್ನು ಸಹ ಮುರಿಯಲು ಯತ್ನಿಸಿದ್ದಾಗಿ ವರದಿಯಾಗಿದೆ. ದುಷ್ಕೃತ್ಯಕಾರರ ಪೈಕಿ ಇಬ್ಬರನ್ನು ಪೋಲೀಸರು ಬಂಧಿಸಿ, ದಾಳಿಯ ಮುಖ್ಯ ವ್ಯಕ್ತಿಯನ್ನು ಹುಡುಕುತ್ತಿದ್ದಾರೆನ್ನಲಾಗಿದೆ.

ಸೇತುವೆಗಳು ಜಖಂ

ಬೇಗಾರು: ಇಲ್ಲಿನ ಮಾಲತಿ ನದಿಗೆ ಕಟ್ಟಿರುವ ಸೇತುವೆಯು ಮುರಿದುಬಿದ್ದ ಕಾರಣ ವಾಹನ ಸಂಚಾರವನ್ನು ನಿಲ್ಲಿಸಲಾಗಿದೆ. ಕಳೆದ ಎಪ್ರಿಲ್ ನಲ್ಲಷ್ಟೇ ಸೇತುವೆಯನ್ನು ದುರಸ್ತಿಮಾಡಲಾಗಿತ್ತು ಎಂಬುದನ್ನು ಜ್ಞಾಪಿಸಬಹುದು.

ವಾಹನಗಳ ಸಂಚಾರ ಅಸ್ತವ್ಯಸ್ತವಾಗಿದೆ. ಕನ್ನಡ ಜಿಲ್ಲೆಗೆ ನೇರ ಓಡಾಡುವ ಮಿನಿ ಬಸ್ಸುಗಳಿಗೆ ಆ ಕಡೆಗೂ ಈ ಕಡೆಗೂ ಸಂಪರ್ಕ ಕಲ್ಪಿಸಿ ಓಡಾಡಿಸಲಾಗುತ್ತಿದೆ. ಪ್ರಯಾಣಿಕರ ಪಾಡು "ಕೇರಾಫ್ ಬಿಸಿಲು, ಮಳೆ, ಫುಟ್ ಪಾತ್" ಆಗಿದೆ. ಹೆಗ್ಗೆ ಮೂಟೆ ಹೊರುವ ಹುಡುಗರಿಗೆ ಸುಗ್ಗಿಯಾಗಿದೆ.

ಇಲ್ಲಿಗೆ ಸಮೀಪದ ಜೋಗೂರು ಸೇತುವೆಯೂ ಸಹ ಜಖಂ ಆಗಿದ್ದು ಸೇತುವೆಯ ಕೈಪಿಡಿ ಬಿದ್ದುಹೋಗಿ ನಾಲ್ಕೈದು ತಿಂಗಳಾಯಿತು. ಈಗ ಕೆಳಗಡೆಯ ಕಲ್ಲು ಜರಿಯಲು ಪ್ರಾರಂಭವಾಗಿದೆ ಎಂದು ಗೊತ್ತಾಗಿದೆ.

ಶೃಂಗೇರಿ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆ :
ಘರ್ಷಣೆ, ಸಂಧಾನ, ಪರಿಸ್ಥಿತಿಶಾಂತ; ಹಲವರ ಮೇಲೆ ಮೊಕದ್ದಮೆ

ಶೃಂಗೇರಿ: ಇಲ್ಲಿನ ಜೆ. ಸಿ. ಬಿ. ಎಂ. ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆ ಸಂಬಂಧ ನಡೆದ ಘರ್ಷಣೆಗಳು ಮುಕ್ತಾಯಗೊಂಡಿದ್ದು, ಊರಿನ ಮುಖಂಡರ ಮಧ್ಯಪ್ರವೇಶದಿಂದ ಸಂಧಾನ ಏರ್ಪಟ್ಟು ಪರಿಸ್ಥಿತಿ ಶಾಂತವಾಗಿದೆ.

ಹೆಚ್. ಎಂ. ರಾಮಪ್ಪಗೌಡನ ವಿರುದ್ಧ ರಾಜೇಂದ್ರ (ಇಬ್ಬರೂ ಅಂತಿಮ ಬಿ. ಎ.) ಅಧ್ಯಕ್ಷನಾಗಿ ಆಯ್ಕೆಯಾಗಿದ್ದು, ಗಲಭೆಯ ಸಂಬಂಧ ಹಲವು ವಿದ್ಯಾರ್ಥಿಗಳ ವಿರುದ್ಧ ಹೊರಡಿಸಿದ್ದ ಅಮಾನತು ಆಜ್ಞೆಯನ್ನು ಪ್ರಿನ್ಸಿಪಾಲರು ಹಿಂತೆಗೆದುಕೊಂಡಿದ್ದಾರೆ.

ಆ. ೧೩ ರಂದು ಹಾಸ್ಟೆಲಿನಲ್ಲಿ ಗಲಭೆ ನಡೆಸಿದರೆಂದು ಹೆಚ್. ಎಂ ರಾಮಪ್ಪಗೌಡ ಮತ್ತು ೭ ಜನ ಸಂಗಡಿಗರ ವಿರುದ್ಧ ಹಾಗೂ ಆ. ೧೫ ರಂದು ಕಾಲೇಜಿನಲ್ಲಿ ಚೂರಿ ಇರಿತದ ಆರೋಪದ ಮೇಲೆ ಅತನೊಂದಿಗೆ ೮ ಜನರ ವಿರುದ್ಧ ಮೊಕದ್ದಮೆ ಹೂಡಲಾಗಿದೆ. ಅದೇ ದಿನ ಪರಸ್ಪರ ಹಲ್ಲೆ ಮಾಡಿಕೊಂಡ ಆರೋಪದಮೇಲೆ ಖಾದರ್ ಮತ್ತು ಅನಿಲ್ ಕುಮಾರ್ ಎಂಬಿಬ್ಬರ ಮೇಲೂ ೨ ಪ್ರಕರಣ ದಾಖಲಾಗಿವೆ. ಇದಲ್ಲದೆ ಆ. ೧೫ ರಂದು ಹಾಲಿ ಕಾರ್ಯದರ್ಶಿಯಾದ ಶ್ರೀನಿವಾಸಮೂರ್ತಿಯ ಮನೆಯಿಂದ ಕಲ್ಲಿನಲ್ಲಿ ರಾಮಪ್ಪನಿಗೆ ಹೊಡೆಯಲಾಯಿತೆಂಬ ದೂರು ಕೂಡ ದಾಖಲಾಗಿದೆ.

ಆ. ೨೪ ರಂದು ತಾಹಶೀಲ್ದಾರ್ ಕೆ. ರಮಾನಂದ ರೈ ಮತ್ತು ಸಿಬ್ಬಂದಿ ಶಾಂತಿ ಸಭೆ ಏರ್ಪಡಿಸಿ, ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಗಲಭೆಗೆ ಮಂಗಳ ಹಾಡಿದರು. ಎರಡೂ ತಂಡಗಳಲ್ಲಿ ಒಟ್ಟು ೩ ಜನರಿಗೆ ಗಾಯಗಳಾಗಿವೆ. ರಾಜೇಂದ್ರನ ಪಂಗಡದವರ ವಿರುದ್ಧ ಯಾವ ಮೊಕದ್ದಮೆಯೂ ದಾಖಲಾಗಿಲ್ಲ. (ಅನಿಲ್ ಕುಮಾರ್ ಹೊರತು)

ಆರೋಪ-ಪ್ರತ್ಯಾರೋಪ

ಹೆಚ್. ಎಂ. ರಾಮಪ್ಪಗೌಡನ ಪ್ರಕಾರ, ಮೊದಲಿನಿಂದ ತನ್ನ ವಿರುದ್ಧ 'ಬ್ರಾಹ್ಮಣ ವಿರೋಧಿ' ಎಂದು ಅಪಪ್ರಚಾರ ಮಾಡಿದ್ದಲ್ಲದೆ, ಆ. ೧೩ ರಂದು ತರಗತಿಗಳ ಪ್ರತಿನಿಧಿಗಳ ಚುನಾವಣೆ ನಡೆದ ತಕ್ಷಣ-ಪದಾಧಿಕಾರಿಗಳ ಚುನಾವಣೆ ನಡೆದ ಆ. ೧೮ರ ವರೆಗೆ-ಅವರನ್ನು ತಾನು ಭೇಟಿ ಮಾಡಲಾಗದಂತೆ ಅವರಲ್ಲಿ ೧೯ ವಿದ್ಯಾರ್ಥಿ ಹಾಗೂ ೨ ವಿದ್ಯಾರ್ಥಿನಿಯರನ್ನು ಎರಡು ಕಡೆ ಅಡಗಿಸಿಟ್ಟು, ಅಧ್ಯಕ್ಷ ಸ್ಥಾನಕ್ಕೆ ತಾನು ಮತ ಯಾಚಿಸದಂತೆ ಮಾಡಲಾಯಿತು ಹಾಗೂ ಇದರಲ್ಲಿ ಜಾತಿಯನ್ನು ಬಳಸಲಾಯಿತು.

ಆದರೆ, ಹಿಂದಿನ ವರ್ಷಗಳಲ್ಲಿ ಕೆಲವರು ಗೂಂಡಾಗಿರಿಯಿಂದ ಬೆದರಿಕೆ ಹಾಕಿ ಓಟು ಕೇಳುತ್ತಿದ್ದುದರಿಂದ ಈ ಬಾರಿ ಈ ಎಲ್ಲ ಪ್ರತಿನಿಧಿಗಳು ಸ್ವ-ಇಚ್ಛೆಯಿಂದ (ತಾನಿರುವ ಮನೆಯಲ್ಲಿ) ಬಂದು ಸೇರಿಕೊಂಡಿದ್ದಾಗಿ ರಾಜೇಂದ್ರ ಹೇಳುತ್ತಾನೆ.

ಗೂಂಡಾಗಿರಿಯ ಆರೋಪವನ್ನು ಅಲ್ಲಗಳೆಯುತ್ತಾ, ರಾಮಪ್ಪ, ೨ ವರ್ಷಗಳ ಹಿಂದೆ ತನ್ನ ತಂಡದಿಂದ ತಾನೊಬ್ಬ ಮಾತ್ರ ಆಯ್ಕೆಯಾಗಿದ್ದು, ಸಹಕಾರ್ಯದರ್ಶಿಯಾಗಿ ವಿದ್ಯಾರ್ಥಿಗಳ ಮೆಚ್ಚುಗೆ ಗಳಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತಾನೆ. ಪದಾಧಿಕಾರಿಗಳ ಚುನಾವಣೆ ಮುಂದೂಡುವಂತೆ ಪ್ರಿನ್ಸಿಪಾಲರಲ್ಲಿ ೧೩ರ ರಾತ್ರಿ ತಾನು ಮಾಡಿದ ವಿನಂತಿಗೆ ಒಪ್ಪಿಗೆ ದೊರೆಯಲಿಲ್ಲ; ಪ್ರತಿನಿಧಿಗಳನ್ನು ಭೇಟಿ ಮಾಡಲು ಸಹಾಯ ಮಾಡುವಂತೆ ಪೋಲೀಸರಲ್ಲಿ ಮಾಡಿದ ವಿನಂತಿಯೂ ಫಲಿಸಲಿಲ್ಲ ಎನ್ನುತ್ತಾನೆ.

ವೃಥಾ ಕಾಲಕ್ಷೇಪ

"ನನ್ನ ಹೆಸರಿನಲ್ಲಿ ಸುಲಿಗೆ ನಡೆಯುತ್ತಿದೆ"

ಗಜಮುಖನ ಅಳಲು

ಎಲ್ಲ ಭಕ್ತಶಿರೋಮಣಿಯಾದ ಸಂಪಾದಕನೆ!

(ನಿನಗೆ ನನ್ನಲ್ಲಿರುವ ಭಕ್ತಿ ಎಷ್ಟೆಂದು ಗೊತ್ತು ಬಿಡು! ಆದರೂ ಏನೋ ಸಂಪ್ರದಾಯ ಅಂತ ಹೀಗೆ ಸಂಬೋಧಿಸಿದ್ದೇನೆ ಹೋಗಲಿ, 'ನೀನೂ ನನ್ನ ಹಾಗೇ ಬಡವರ ಪಕ್ಷಪಾತಿಯಾದ್ದರಿಂದ ನನಗೂ ನಿನಗೂ ಹತ್ರ ಹತ್ರ' ಎಂದರೆ ನೀನು ನನ್ನ 'ಬಡವರ ಪಕ್ಷಪಾತಿತನ'ವನ್ನೂ ಟೀಕಿಸುವನು– 'ರಾಜಕೀಯಪುಢಾರಿಗಳ ಡೈಲಾಗ್' ಅಂತ. ಇರಲಿ, ನನ್ನ ಈ ಕರುಣ ಕತೆಯನ್ನಿಷ್ಟು ನಿನ್ನ ಓದುಗರ ಮುಂದಿಡಲು ಸಹಾಯ ಮಾಡು.)

ಇಂದಿನ ಈ ದುಬಾರಿ ಯುಗದಲ್ಲಿ ಯಾವ ಯಾವ ರೀತಿಯಲ್ಲಿ ಸುಲಿಗೆ ನಡೆಯುತ್ತಿದೆ ಎಂಬುದನ್ನು ಇಷ್ಟು ದಿನಗಳವರೆಗೆ ಸಹಿಸಿಕೊಂಡಿದ್ದು, ಇನ್ನು ತಾಳಲಾರದೆ ನನ್ನ ಮನೋವೇದನೆಯನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಈ ಊರುಗಳೇ ಸಣ್ಣವು. ಆದರೆ ಇಲ್ಲಿ ಕೂರಿಸುವ ನನ್ನ ಮೂರ್ತಿ ಬಹು ದೊಡ್ಡವು. ಇರಲಿ, ವರ್ಷಕೊಮ್ಮೆ ಸಾರ್ವಜನಿಕರು ಸೇರಿ ನನ್ನನ್ನು ಪೂಜಿಸುವುದು ಪದ್ಧತಿ. ಆದರೆ ನನ್ನ ಹೆಸರಿನಲ್ಲಿ ಮಾಮೂಲು ಪಡೆಯುವ ಅದೆಷ್ಟು ಕಾಣದ ಕೈಗಳು ಮುಂಪಾಗಿವೆ ಎಂಬುದು ನನಗೇ ಗೊತ್ತು.

ಬಿ. ಚಂದ್ರಶೇಖರ ಹೆಗ್ಡೆ

ಬಹಳ ಹಿಂದಿನಿಂದಲೂ ಜನ ನನ್ನನ್ನು ಪೂಜಿಸಿಕೊಂಡ ಬಗ್ಗೆ ನನಗೆ ಒಂದಿನಿತೂ ಬೇಸರ ಬಂದಿರಲಿಲ್ಲ. ಆದರೆ ಇತ್ತೀಚೆಗಿನ ದಿನಗಳಲ್ಲಿ ನನ್ನ ಹೆಸರಿನಲ್ಲಿ ನಡೆಯುವ ಹಗಲು ದರೋಡೆಯನ್ನು ಕಂಡು ಒದ್ದಾಡುವ ಪರಿಸ್ಥಿತಿ ನನಗಾಗಿದೆ.

ಹಿಂದೆಲ್ಲಾ ಸಮಿತಿಗಳವರು ಸಾರ್ವಜನಿಕರಿಂದ ಚಂದಾ ವಸೂಲಿ ಮಾಡಿ ಅದರ ಆಯವ್ಯಯ ಪಟ್ಟಿಯನ್ನು (ಸರಿಯಲ್ಲದಿದ್ದರೂ) ಜನತೆಯ ಮುಂದಿಡುತ್ತಿದ್ದರು. ಆದರೆ ಬರಬರುತ್ತ ಅದು ಅಗೋಚರವಾಗಿದೆ. ಇತ್ತೀಚಿಗೆ ಕೆಲವು ಕಡೆ ಸಮಿತಿಯವರು ಸರಕಾರಿ ಅಧಿಕಾರಿಗಳೊಡನೆ ಶಾಮೀಲಾಗಿ ಚಂದಾ ಹಣ ವಸೂಲು ಮಾಡಲು ಬೀದಿಗಿಳಿಯುತ್ತಾರೆ. ನನಗೇ ಹೆದರದಿದ್ದ ಬಡಜನತೆ ಈ ಅಧಿಕಾರಿಗಳಿಗೆ ಹೆದರಿ ಅವರು ಕೇಳಿದಷ್ಟು ಮೊತ್ತವನ್ನು ಕೈಗಿತ್ತು, ಮೌನವಾಗಿ, ನನಗೇ ಶಾಪ ಹಾಕತೊಡಗಿದ್ದಾರೆ.

ಇಂತಹ ಅವ್ಯವಹಾರವನ್ನು ಅರಿತ ಸಾರ್ವಜನಿಕರು ಚಂದಾ ಹಣವನ್ನು ಕೊಡಲು ನಿರಾಕರಿಸಿದಾಗ ಸಮಿತಿಯ ಕಣ್ಣು ಬಡ ವರ್ತಕರ ಹಾಗೂ ಹೋಟೇಲು ಉದ್ಯಮಿಗಳ ಮೇಲೆ ಬೀಳುತ್ತದೆ. ದಿನ ಖರ್ಚಿಗೇ ಲೆಕ್ಕ ಹಾಕುವ ಹೋಟೇಲು ಮಾಲಿಕರುಗಳ ಸ್ಥಿತಿ ತ್ರಿಶಂಕು ಸ್ವರ್ಗ!

(೩ನೇ ಪುಟ ನೋಡಿ)

ಗಣಪಾಷ್ಟಕ

– ೧ –

ಹಿಂದೆಲ್ಲ ಗಣಪತಿಗೆ ಶಾಸ್ತ್ರೀಯ ಸಂಗೀತ
ಈಗವನು ಕೇಳುವುದು ಚಿತ್ರಗೀತೆಯ ಕೊರೆತ
'ಬಳಗದಾ ಗೆಳೆಯರೇ, ಮುಂದೇನು?' ಎಂದೆ
"ಇಡಿಸುವೆವು ಕ್ಯಾಬರೆಯ ಇನ್ನು ಮುಂದೆ"

– ೨ –

ನೊಸ್ನೆ ಮಾರ್ಕೆಟ್ಟಿನಲಿ ಗಣಪಣ್ಣ ಸಿಕ್ಕ!
ಕೇಳಿದೆನು : 'ಗಣಪಣ್ಣ, ದಾನಿ ಜೊಕ್ಕ?'
"ಮೊನು ತಿಂದೇನಯ್ಯ; ಸೇಂದಿ ಕುಡಿದೇನು
ತಾಳಲಾರೆನೊ ಗೆಳೆಯ ಆರ್ಕೆಸ್ಟ್ರವನ್ನು!"

— ನಕ್ಷತ್ರಿಕ

"ನಿದ್ದೆಯಲ್ಲಿರುವ ವಿಧಾನಸೌಧ ಎಬ್ಬಿಸಲು"

ಅಕ್ಟೋಬರ್ ೨ ರಂದು ಬೆಂಗಳೂರಲ್ಲಿ ರೈತರ ಬೃಹತ್ ಪ್ರದರ್ಶನ

ಕರ್ನಾಟಕ ರಾಜ್ಯ ರೈತ ಸಂಘ ಗಾಂಧಿ ಜಯಂತಿಯ ದಿನದಂದು ಬೆಂಗಳೂರಲ್ಲಿ ರೈತರ ಭಾರಿ ಪ್ರದರ್ಶನವೊಂದನ್ನು ವ್ಯವಸ್ಥೆ ಮಾಡಿದೆ.

ಈ ಸಂಬಂಧ ಹೊರಡಿಸಿರುವ ಕರಪತ್ರದಲ್ಲಿ ರೈತ ಸಂಘ, "ಕಳೆದೆರಡು ವರ್ಷಗಳಿಂದ ರಾಜ್ಯದ ರೈತರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳ ಠರಾವುಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರೂ ಮೈಮರೆತು ಗಾಢ ನಿದ್ರೆಯಲ್ಲಿರುವ ಸರ್ಕಾರವನ್ನು ಎಬ್ಬಿಸುವುದು ಈ ಪ್ರದರ್ಶನದ ಉದ್ದೇಶ"ವೆಂದು ವರ್ಣಿಸಿದೆ.

"ಕಾರ್ಖಾನೆಗಳವರು, ವರ್ತಕರು, ಸರ್ಕಾರ, ಮತ್ತು ಸರ್ಕಾರಿ ನೌಕರರು ರೈತನ ಸುಲಿಗೆ ಮಾಡುತ್ತಿದ್ದಾರೆ. ದೇಶಕ್ಕೆ ಅನ್ನ ಹಾಕುವುದಲ್ಲದೆ ಹೊರದೇಶದಿಂದ ಅನ್ನಭಿಕ್ಷೆ ತಪ್ಪಿಸಿ ಹೊರದೇಶಗಳಿಗೂ ಅನ್ನ ಕೊಡುತ್ತಿರುವ ರೈತನನ್ನೇ, ಆತ ಸಾಲಗಾರನೆಂದು ಜಪ್ತಿ ಮಾಡುವ ಮೂಲಕ ಅಪಮಾನ ಮಾಡುತ್ತಿದ್ದಾರೆ. ಲಾಠಿ ಏಟು, ಗೋಲಿಬಾರುಗಳಿಂದ ಹಿಂಸಿಸುತ್ತಿದ್ದಾರೆ.

"ಹಳ್ಳಿಗಳ ಸಂಪತ್ತನ್ನು ಲೂಟಿಮಾಡಿ; ಅನವಶ್ಯಕ ವ್ಯವಹಾರಗಳಲ್ಲಿ ಖರ್ಚು ಮಾಡುತ್ತಿದ್ದಾರೆ; ನಿರ್ವೀರ್ಯ ತಳುಕಿನ ನಗರಗಳು ಬೆಳೆಯುತ್ತಿವೆ, ಹಳ್ಳಿಗಳು ಸ್ಮಶಾನಗಳಾಗುತ್ತಿವೆ.

ರೈತಾಪಿ ಜನರಿಗೆ ಕುಡಿವ ನೀರು, ಕಟ್ಟಿಗೆ, ರಸ್ತೆ, ಚರಂಡಿ, ಶಾಲೆ, ಆಸ್ಪತ್ರೆ ಮುಂತಾಗಿ ಯಾವುದೇ ಜೀವನ ಸೌಕರ್ಯಗಳಿಲ್ಲ. ಒಣ ಬೇಸಾಯಗಾರರಿಗೆ ನೀರಾವರಿ ಕೆಲಸ ಆಗುತ್ತಿಲ್ಲ; ನೀರಾವರಿ ರೈತರ ಬೆಳೆಗಳಿಗೆ ಸರಿಯಾದ ಬೆಲೆ ಸಿಕ್ಕಿಲ್ಲ. ಭೂಮಿಯಿಲ್ಲದವರಿಗೆ ಭೂಮಿ ಸಿಕ್ಕಿಲ್ಲ, ಬೇಸಾಯ ಕೂಲಿಗಾರರಿಗೆ ನ್ಯಾಯವಾದ ಕೂಲಿ ಸಿಗುತ್ತಿಲ್ಲ...." ಎಂಬುದಾಗಿ ಸ್ವಾತಂತ್ರ್ಯಾನಂತರದ ರೈತನ ಪರಿಸ್ಥಿತಿಯನ್ನು ವಿವರಿಸಿರುವ ರೈತ ಸಂಘ, ಕೇವಲ ೨ ಕೋಟಿ ಎಕರೆಯಲ್ಲಿ ಬೇಸಾಯ ಮಾಡುತ್ತಿರುವ ಕರ್ನಾಟಕದ ೩ ಕೋಟಿ ರೈತರಿಗೆ ಪೂರ್ಣ ಉದ್ಯೋಗ ಸಣ್ಣ ಕೈಗಾರಿಕೆಗಳ ಮೂಲಕ ಸಾಧ್ಯ; ಆದರೆ ಈ ಕೆಲಸ ಕೂಡ ಆಗುತ್ತಿಲ್ಲ ಎಂದು ಟೀಕಿಸಿದೆ.

ಆ್ಯಂಟನ್ ಶೆಕಾಫ್‌ನ ಕತೆಯ ಕನ್ನಡ ಭಾವಾನುವಾದ **'ಕುನ್ನಿ'** ಈ ವಾರ ಸ್ಥಳದ ಕೊರತೆಯಿಂದ ಪ್ರಕಟವಾಗುತ್ತಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

–ಸಂಪಾದಕ.

ವೇದಿಕೆ

ಹೆಣ್ಣು ಸ್ವಾವಲಂಬಿಯಾದರೆ ಗಂಡಸರ ದುಷ್ಕೃತ್ಯಗಳು ದೂರವಾದಾವು

ಮಾನ್ಯರೇ,

ತಮ್ಮ ಪತ್ರಿಕೆಯಲ್ಲಿ 'ಸಿರಾಜು' ಅವರು ಹೆಣ್ಣು ಸ್ವಾವಲಂಬಿಯಾದರೆ ವರದಕ್ಷಿಣೆಯ ಪಿಡುಗು ಕಡಿಮೆಯಾದೀತೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಬಗ್ಗೆ ನನ್ನದೂ ಸಹಮತವಿದೆ. ಹೆಣ್ಣು ಸ್ವಾವಲಂಬಿಯಾಗುವುದರಿಂದ ಮತ್ತೂ ಒಂದು ಉಪಯೋಗವಿದೆ: ಗಂಡಂದಿರು ಕುಡುಕರೋ, ಜೂಜುಕೋರರೋ ಆಗಿದ್ದರೆ ಅಥವಾ ಆಗುವ ದಾರಿಯಲ್ಲಿದ್ದರೆ ಅವರನ್ನು ತಹಬಂದಿಗೆ ತರಲೂ ಅದು ಸಹಾಯ ಮಾಡುತ್ತದೆ. ಸಮಾಜದಲ್ಲಿ ಬದಲಾವಣೆ ಆದುತ್ತೆಲ್ಲ, ಹೀಗೆ ದುರಭ್ಯಾಸಗಳಿರುವವರೊಂದಿಗೆ ಬದುಕಲು ಅಸಹ್ಯಪಡುವ ಹೆಂಗಸರು, –ಸ್ವಾವಲಂಬಿಗಳಾದರೆ– "ನೀನಿಲ್ಲದಿದ್ದರೂ ಬದುಕಿಯೇನು" ಎನ್ನುವುದು ಸಹಜವೂ ಸಾಮಾನ್ಯವೂ ಆಗುತ್ತದೆ. ಆಗ ಗಂಡಸರು ತಮ್ಮ ವರ್ತನೆಯ ಬಗ್ಗೆ ಎಚ್ಚರಿಕೆಯಿಂದಿರುವುದು ಅನಿವಾರ್ಯವಾಗುತ್ತದೆ.

–ಬಿ. ರಮಾದೇವಿ, ಕೊಪ್ಪ

ಬೇಗಾನೆಯವರಿಗೊಂದು ನೇರ ಪತ್ರ

ಸ್ವಾಮಿ ರಾಮಯ್ಯನವರೆ,

'ಮುಂಜಾವು' ಪತ್ರಿಕೆಯ ಮೂಲಕ ತಮ್ಮಲ್ಲಿ ಒಂದು ಅರಿಕೆ: ನಮ್ಮ ಕ್ಷೇತ್ರದ ಶಾಸಕರಾಗಿ ಈವರೆಗೂ ಸಾಮಾನ್ಯ ಜನರೊಂದಿಗೆ ಯಾವ ರೀತಿಯ ಸಂಪರ್ಕ ಇಟ್ಟುಕೊಂಡಿದ್ದಿರೋ ನನಗೆ ಗೊತ್ತಿಲ್ಲ ಈಗೀಗ ಸಣ್ಣ ಪುಟ್ಟ ಕೆಲಸಗಳಿಗೂ ಶಾಸಕ–ಮಂತ್ರಿಗಳನ್ನು ನೋಡಬೇಕಾಗುವ ಪರಿಸ್ಥಿತಿ ಹುಟ್ಟುತ್ತಿದೆ. ಶಾಸಕರನ್ನು ನೋಡಬೇಕಾದರೆ ಬೆಂಗಳೂರಿಗೇ ಹೋಗಬೇಕಾಗಿರುವುದರಿಂದ ಇದು ಎಷ್ಟು ಕಷ್ಟ ಎನ್ನುವುದು ನಿಮಗೆ ಗೊತ್ತು. ಹೀಗಾಗಿ ಅಲ್ಲಿ ಇಲ್ಲಿ ಕೆಲವರು 'ನಾನು ಮಾಡಿಸಿಕೊಡ್ತೀನಿ' ಎಂದು, ಸಾಮಾನ್ಯರನ್ನು ವಂಚಿಸಲು ಪ್ರಯತ್ನಿಸಿದರೂ ಆಶ್ಚರ್ಯವಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಇನ್ನು ಮುಂದೆ ನೀವು ಹೀಗೆ ಮಾಡಬಹುದೆ?

ಪ್ರತಿ ತಿಂಗಳ ಯಾವುದಾದರೊಂದು ನಿರ್ದಿಷ್ಟ ಭಾನುವಾರ ಶೃಂಗೇರಿ, ಕೊಪ್ಪ, ನರಸಿಂಹರಾಜಪುರಗಳಲ್ಲಿ (ಮೂರೂ ಊರುಗಳಲ್ಲಿ ಒಂದೇ ದಿನ, ಪ್ರತಿ ಊರಿನಲ್ಲಿ ಸುಮಾರು ಎರಡು ಗಂಟೆ) ನೀವು ಸಾಮಾನ್ಯ ಜನರೊಂದಿಗೆ ಒಂದು ಸಂಪರ್ಕ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಆ ಮೂಲಕ ತೀರ ಸಾಮಾನ್ಯ ಪ್ರಜೆಯೂ ನಿಮ್ಮನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಸಾಧ್ಯವಾಗಬೇಕು ಇಂತಹ ಕಾರ್ಯಕ್ರಮದಲ್ಲಿ ಆಯಾ ಊರಿನ ಸಣ್ಣ-ಪುಟ್ಟ ರಾಜಕಾರಣಿಗಳನ್ನು ಭೇಟಿ ಮಾಡುವುದನ್ನು ಸಾಧ್ಯವಿರುವಷ್ಟು ಕಡಿಮೆ ಮಾಡಬೇಕು.

ಯಾವುದೇ ರಾಜಕಾರಣಿಯ ಮಾನಸಿಕ ಆರೋಗ್ಯಕ್ಕೆ ಇಂಥದೊಂದು ಕಾರ್ಯಕ್ರಮ

(೩ನೇ ಪುಟ ನೋಡಿ)

ಓ ದು ಗ ರ ಪು ಟ

"ಸಬ್ಸಿಡಿ ಸಾಲ ಪ್ರಾಪ್ತಿ ಎಂದು?"

'ಮುಂಜಾವು' ಸಂಪಾದಕರಲ್ಲಿ,

ಸ್ವಾಮಿ,

ಕಿಗ್ಗಾ ಮರ್ಕಲು ಗ್ರಾಮದ ವಾಸಿ ಸಣ್ಣ ರೈತ ಚಂದ್ರಶೇಖರನು ವಿಸ್ಮಯಗೊಂಡು ಕೇಳುವ ಪ್ರಶ್ನೆ:

ನಮ್ಮಗಳಿಗೆ ಸಬ್‌ಸಿಡಿ ಸಾಲ ಕೊಡುತ್ತೇವೆಂದು ಆಸೆ ತೋರಿಸಿ ನಮ್ಮಿಂದ ಅರ್ಜಿ ಪಡೆದು ನೆಮ್ಮಾರು ಸೊಸೈಟಿಗೆ ಕಳುಹಿಸಿ, ಹಲವಾರು ಸಾರಿ ನಮ್ಮನ್ನು ತಿರುಗಿಸಿ, ನಮಗೆ ಹತ್ತು ಇಪ್ಪತ್ತು ರೂ. ಗಳನ್ನು ದಂಡ ಹಾಕಿಸಿ, ಆ ಅರ್ಜಿಗಳನ್ನು ಕಸದ ಬುಟ್ಟಿಗೆ ಎಸೆದು. "ಹೊಸ ಸ್ಕೀಮು ಇದೆ" ಎಂದು ಪುನಃ ಅರ್ಜಿಯನ್ನು ಪಡೆದು ಅದೇ ಸೊಸೈಟಿಯವರು ನಮ್ಮಗಳಿಗೆ ಪುನಃ ೪-೬ ತಿರುಗಾಟ ಮಾಡಿಸಿ, ಜಾಮೀನು ಕೊಡಬೇಕೆಂದು, ನಮ್ಮಿಂದ ಜಾಮೀನು ಪಡೆದು ಪ್ರಾಮಿಸರಿ ಬರೆಸಿಕೊಂಡು ಎರಡು ಮೂರು ತಿಂಗಳಾದರೂ ಹಣ ಕೊಡದೆ ಇದ್ದಾಗ್ಯೂ ನಮ್ಮ ಸಂಕಟವನ್ನು ಕೇಳುವ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರೂ ಇಲ್ಲವೇ? ಎಂದು ವಿಷಾದಿಸುತ್ತೇವೆ.

ಇನ್ನೊಂದು ಪ್ರಶ್ನೆ:-

ಬೇರೆ ಸಾಹುಕಾರರು ಯಾರಾದರೂ ಹಣ ಕೊಡದೆ ಪ್ರಾಮಿಸರಿ ಬರೆಸಿಕೊಂಡರೆ ಅದು ಅಪರಾಧವಾಗುತ್ತದೆ. ಸಹಕಾರ ಸಂಘಗಳಿಗೆ ಇದು ನ್ಯಾಯವೇ? ಇದನ್ನು ಸಂಬಂಧಪಟ್ಟವರು ವಿಮರ್ಶೆ ಮಾಡಿ ನಮ್ಮಗಳಿಗೆ ಇನ್ನಾದರೂ ನ್ಯಾಯ ದೊರಕಿಸಿ ಕೊಡುತ್ತಾರಾಗಿ ನಂಬಿರುತ್ತೇವೆ.

-ಕೆ. ಚಂದ್ರಶೇಖರ, ಕಿಗ್ಗ

[ಈ ಪತ್ರದ ಬಗ್ಗೆ ನೆಮ್ಮಾರಿನ ವ್ಯವಸಾಯ ಸೇವಾ ಸಹಕಾರ ಸಂಘದ ಕಾರ್ಯದರ್ಶಿಗಳ ವಿವರಣೆಯನ್ನು ಕೆಳಗೆ ಕೊಡಲಾಗಿದೆ:]

ಮರ್ಕಲ್ ಗ್ರಾಮದ ವಾಸಿ ಸಣ್ಣ ರೈತರಾದ ಚಂದ್ರಶೇಖರ ಇವರ ಅಹವಾಲಿನ ಬಗ್ಗೆ ತಿಳಿಸುವುದೇನೆಂದರೆ, ಇವರು ಸಂಘದಲ್ಲಿ ಸ.ಗ್ರಾ.ಅ. ಯೋಜನೆಯಲ್ಲಿ ಸಾಲಕ್ಕೆ ಅರ್ಜಿ ಹಾಕಿರುತ್ತಾರೆ. ಸಂಘದಲ್ಲಿ ಇವರ ಅರ್ಜಿ ಸಾಲದ ಹಣವನ್ನು ಕೊಡಬಹುದಾಗಿ ಚಿಕ್ಕಮಗಳೂರು ಡಿ.ಸಿ.ಸಿ. ಬ್ಯಾಂಕಿಗೆ ಶಿಫಾರಸ್ ಮಾಡಿ ಅರ್ಜಿ ಕಳಿಸಿರುತ್ತೆ. ಇವರ ಸಾಲದ ಅರ್ಜಿ ಪಣ ಬ್ಯಾಂಕಿನಲ್ಲಿ ಮಂಜೂರಾಗಿದೆ. ಇವರಿಗೆ ಹಣ ನೀಡಬೇಕಾದರೆ, ಇವರು ಕೇಳಿರುವ ಮಾಲನ್ನು ಖರೀದಿಸಿ ಕೊಡಲು ಶೃಂಗೇರಿ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಒಂದು ಖರೀದಿ ಸಮಿತಿ ಇದೆ. ಈ ಖರೀದಿ ಸಮಿತಿಯವರು ಸಾಲಗಾರರು ಕೇಳಿದ ವಸ್ತುಗಳನ್ನು ಕೊಡಿಸಬೇಕು. ನಾವು ಹಣವನ್ನು ವಸ್ತು ಕೊಟ್ಟ ಮಾಲೀಕರಿಗೆ ಕೊಡಬೇಕು. ಜಿಲ್ಲಾ ಬ್ಯಾಂಕಿನವರು ಇವರ ಬಾಬ್ತು ಸಾಲದ ನೋಟುಗಳನ್ನು ಈ ತಿಂಗಳಲ್ಲಿ ಬಿಡುಗಡೆ ಮಾಡಿರುತ್ತಾರೆ. ಈ ತಿಂಗಳಲ್ಲಿ ಅವರುಗಳಿಗೆ ಸಾಲದ ಹಣ ಹಂಚಲಾಗುತ್ತದೆ. (ಮೊದಲಿ ಸಾಲ ಕೇಳಿದವರು ಪ್ರಾಮಿಸರಿ ನೋಟ್ ಬರೆದು ಕೊಡಬೇಕು. ನಾವು ಡಿ. ಸಿ. ಸಿ. ಬ್ಯಾಂಕಿಗೆ ಆ ಪ್ರಾಮಿಸರಿ ನೋಟನ್ನು ಮೊದಲು ಕೊಟ್ಟು ಮಂಜೂರಾದ ಹಣ ಪಡೆಯಬೇಕು. ಸಹಕಾರಿ ಸಂಘಗಳಲ್ಲಿರುವ ಕ್ರಮ ಇದು. ಹೊರತು ಚಂದ್ರಶೇಖರ್ ರವರಿಂದ ಯಾವುದೇ ಹಣ ಪಡೆದಿಲ್ಲಾ ಮತ್ತು ಶೇರ್ ಹಣ ರೂ. ೧೧ ಅವರ ಲೆಕ್ಕಕ್ಕೆ ಹಾಕಿಕೊಟ್ಟಿದೆ. ಚಂದ್ರಶೇಖರ್ ರವರು ೪-೬ ಸಾರಿ ತಿರುಗಿದರೆ ನಾವು ಜವಾಬ್ದಾರರಲ್ಲಾ. ಕಾರಣ ಪಾರ್ಟಿಗಳು ಸಾಲಕ್ಕೆ ಅರ್ಜಿ ಹಾಕಲು ಒಂದು ಸಾರಿ ಬರಬೇಕು. ಬಾಂಡ್ ಬರೆದುಕೊಡಲು ಒಂದು ಸಾರಿ ಬರಬೇಕು. ಎರಡು ಸಾರಿ ಸಂಘಕ್ಕೆ ಬರಬೇಕೆ ವಿನಹಃ ೪-೬ ಸಾರಿ ಬರುವ ಪ್ರಮೇಯ ಇರುವುದಿಲ್ಲ

ರೈತ ಸಂಘ ಎಚ್ಚೆತ್ತುಕೊಳ್ಳಲಿ

ಮಾನ್ಯರೆ,

ಈಗ ರಾಜ್ಯಾದ್ಯಂತ ಎಲ್ಲೆಡೆಯಲ್ಲೂ ರೈತಸಂಘಗಳು ಸರ್ಕಾರದ ರೈತ ವಿರೋಧಿ ಧೋರಣೆಯನ್ನು ತೀವ್ರವಾಗಿ ಪ್ರತಿಭಟಿಸುತ್ತಿರುವುದು ಸರಿಯಷ್ಟೆ. ಆದರೆ ಕೊಪ್ಪಾ ತಾಲ್ಲೂಕಿನ ರೈತ ಸಂಘವು ಮಾತ್ರ ಈ ದಿಸೆಯಲ್ಲಿ ಮೌನ ತಾಳಿದೆ. ಇದರಿಂದ ಕೊಪ್ಪಾ ತಾಲ್ಲೂಕಿನ ರೈತಸಂಘದ ಅಸ್ತಿತ್ವದ ಬಗ್ಗೆಯೇ ರೈತರಿಗೆ ಸಂಶಯ ಮೂಡುವಂತಾಗಿದೆ. ರೈತರ ಶೋಷಣೆ ನಡೆಯುತ್ತಿರುವ ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತ ಸಂಘದ ನಾಯಕರುಗಳು ತಾಟಸ್ಥ್ಯ ನೀತಿಯನ್ನು ಅನುಸರಿಸುವುದು ಸರಿಯಲ್ಲ. ಇನ್ನಾದರೂ ಸಂಘದ ಪದಾಧಿಕಾರಿಗಳು ಎಚ್ಚೆತ್ತು ಬೇರೆ ತಾಲ್ಲೂಕುಗಳಂತೆ ನಮ್ಮ ತಾಲ್ಲೂಕಿನಲ್ಲೂ ಸಹ ರೈತನ ಬಗೆಗಿನ ಸರ್ಕಾರದ ಅಸಡ್ಡೆಯನ್ನು ಪ್ರತಿಭಟಿಸಲು ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತಾಗಲಿ.

-ಜಾನಲ್ಮನೆ ಸುರೇಶ್ ನಾಯಕ್

ನಮ್ಮ ಸಂಘದಲ್ಲಿ ಸುಮ್ಮನೆ ಸದಸ್ಯರುಗಳನ್ನು ಅಲೆಸುವ ಆಸೆ ಇಲ್ಲ.

ಈ ವಿಚಾರ ಮುದ್ರಣಕ್ಕೆ ಮೊದಲೆ ನಮಗೆ ತಿಳಿಸಿ. ಅಭಿಪ್ರಾಯ ತಿಳಿಯುವ ಬಗ್ಗೆ ತಿಳಿಸಿದ್ದಕ್ಕೆ ತುಂಬಾ ಧನ್ಯವಾದಗಳು.

(ಸಹಿ) **ಕಾರ್ಯದರ್ಶಿ,**
ವ್ಯ.ಸೇ.ಸ.ಸಂಘ, ನೆಮ್ಮಾರು,
ಶೃಂಗೇರಿ ತಾ||

'ಸಾಗುವಳಿ ಕೊಡಿಸಿ, ಉಪಟಳ ತಪ್ಪಿಸಿ'

ಸ್ವಾಮಿ,

ಶೃಂಗೇರಿ ತಾಲ್ಲೂಕ್ ಕಸಬಾ ಹೋಬಳಿ ಬೆಟ್ಟಗೆರೆ ಗ್ರಾಮದ ಹರಿಜನ ಗುಂಡ ಎಂಬುವರ ಮಗ ಅಣ್ಣಪ್ಪನೆಂಬವನಿಗೆ ಇದೇ ಗ್ರಾಮದ ಸ.ನಂ. ೧೨೦ರಲ್ಲಿ ೨ ಎಕರೆ ಬಗುಂಪೆ ಭೂಮಿ ಸುಮಾರು ೧೫ ವರ್ಷಗಳ ಹಿಂದೆ. ಆದಂದೆ ವೀರಪ್ಪ ಗೌಡರು ಜಮಾನಾ ನೆಗೆ ನಿಲ್ಲುವ ಮೊದಲು ಮಂಜೂರು ಆಗಿದ್ದು, ಇಲ್ಲಿಯವರೆಗೂ ಸಾಗುವಳಿ ಚೀಟಿ ಸಿಕ್ಕಿರುವುದಿಲ್ಲ. ಆಮೇಲೆ ಅದೇ ಜಾಗದಲ್ಲಿ ಮೋಟು ಪೂಜಾರಿ ಎಂಬವರು ರಾತ್ರೋರಾತ್ರಿ ಬಂದು ಬಿಡಾರ ಹಾಕಿ ಈಗ ಮನೆ ಕಟ್ಟಿಕೊಂಡಿರುತ್ತಾರೆ. ನನಗೆ ಸಾಗುವಳಿ ಮಾಡಲು ಬಿಡುವುದಿಲ್ಲ. ಸರ್ವೆ ಆಗಿದ್ದರೂ ಸಾಗುವಳಿ ಚೀಟಿಯ ಬಗ್ಗೆ ತಾಲ್ಲೂಕ್ ಕಚೇರಿಯಲ್ಲಿ ವಿಚಾರಿಸಿದರೆ ಸೂಕ್ತವಾದ ಉತ್ತರ ಸಿಗುತ್ತಿಲ್ಲ. ಸಂಬಂಧಪಟ್ಟವರು ಇತ್ತ ಗಮನ ಹರಿಸಿ, ಸಾಗುವಳಿ ಚೀಟಿ ಕೊಡುವುದರ ಜೊತೆಗೆ ಮೋಟುಪೂಜಾರ ಉಪಟಳವನ್ನು ತಪ್ಪಿಸುತ್ತಾರೆ ಎಂದು ಭಾವಿಸಲೇ?

-ಅಣ್ಣಪ್ಪ, ಬೆಟ್ಟಗೆರೆ.

[ಈ ಬಗ್ಗೆ ಶೃಂಗೇರಿ ತಾ|| ತಹಸೀಲ್ದಾರರ ಪ್ರತಿಕ್ರಿಯೆ ಕೇಳಿ ನಾವು ಆಗಸ್ಟ್ ೧೮ರಂದು ಬರೆದ ಪತ್ರಕ್ಕೆ ಈವರೆಗೂ ಉತ್ತರವಿಲ್ಲ. -ಸಂ.]

ಕೆಲ್ಲಾರು-ನೆಮ್ಮಾರು ರಸ್ತೆಯ ದುರವಸ್ಥೆ

ಮಾನ್ಯರೇ,

ಬೇಗಾರು-ನೆಮ್ಮಾರು ಲೋಕೋಪಯೋಗಿ ಇಲಾಖೆ ರಸ್ತೆಯ ಕೆಲ್ಲಾರು-ನೆಮ್ಮಾರು ಭಾಗ ಇರುವಂಥ ಅವಸ್ಥೆಯಲ್ಲಿ ಯಾವ ಪಂಚಾಯ್ತಿ ರಸ್ತೆಯೂ ಇರುವುದಿಲ್ಲ. ಇದರ ಬಗ್ಗೆ ಅಧಿಕಾರಿಗಳಿಗೆ, ಮಂತ್ರಿಗಳಿಗೆ ನಾವು ಮನವಿ ಮಾಡಿಕೊಂಡು ಮುಗಿಯಿತು. ಕೊನೆಗೆ ನಿಮ್ಮ ಪತ್ರಿಕೆಗೆ ಬರೆಯುತ್ತಿದ್ದೇವೆ.

ಮಳೆಗಾಲದಲ್ಲಿ ನೀರು ಚರಂಡಿಯಲ್ಲಿ ಹರಿಯದೆ ರಸ್ತೆಯ ಮಧ್ಯೆಯೇ ಚರಂಡಿ ಮಾಡಿಕೊಂಡು ಹರಿದಿದ್ದರಿಂದ ರಸ್ತೆಯೆಲ್ಲ ಕೊರಕಲು ಹೊಂಡಗಳು ಬಿದ್ದಿವೆ. ಮರ್ಕಲ್ ಪಂಚಾಯ್ತಿ ವ್ಯಾಪ್ತಿಯ ಮೂರು ಗ್ರಾಮಗಳ ಸುಮಾರು ತೊಂಬತ್ತು ಮಕ್ಕಳು ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಈ ರಸ್ತೆಯಲ್ಲೇ ಓಡಾಡಬೇಕು. ಸಾರ್ವಜನಿಕರೇನಾದರೂ ರಾತ್ರಿ ಹೊತ್ತು ಬಂದರೆ ತಿರುಗಾಡುವುದು ಹೇಗೆ?

ಇದೇ ರಸ್ತೆ ಗಳಿಮುಡಿ ಎಂಬಲ್ಲಿ ಹೊಳೆಯ ಕೊರೆತಕ್ಕೆ ಸಿಕ್ಕಿ ಪೂರ್ತಿ ಕೊರೆದಿದೆ. ವಾಹನಗಳು ತಿರುಗಾಡಬೇಕಾಗಿದ್ದ ಈ ಲೋಕೋಪಯೋಗಿ ಇಲಾಖೆ ರಸ್ತೆ ಮನುಷ್ಯರು ತಿರುಗಾಡಲೂ ಅಯೋಗ್ಯವಾಗಿದೆ.

ಕೊರೋಡಿ ಎಂಬಲ್ಲಿ ಈ ರಸ್ತೆಯ ಮೇಲೆ ಕಳೆದ ವರ್ಷ ಬಿದ್ದ ಮರ ಹಾಗೆಯೇ ಇದ್ದು, ಜನ ಬಹಳ ಪ್ರಯಾಸಪಟ್ಟು ತಿರುಗಾಡಬೇಕಾಗಿದೆ. ಅಲ್ಲಿ ನೀರು ಕೂಡ ರಸ್ತೆಯನ್ನು ಕಬಳಿಸಿದೆ.

ಈ ರಸ್ತೆಯ ರಿಪೇರಿಗೆ ಬೀಳುವುದಕ್ಕಿಂತ ನಾಲ್ಕು ಪಟ್ಟು ಹಣವನ್ನು ಜನರಿಗೆ ಉಪಯೋಗವಿಲ್ಲದಲ್ಲಿ ಹಾಕಿ ಪೋಲುಮಾಡುವುದನ್ನು ನೋಡಿದ್ದೇವೆ. ಆದರೂ ಈ ರಸ್ತೆ ಮಾತ್ರ ರಿಪೇರಿ ಆಗಿಲ್ಲ. ಈ ಬಗ್ಗೆ ತಾ.ಅ. ಮಂ. ಸದಸ್ಯರಲ್ಲಿ ಹೇಳಿಕೊಂಡರೂ ಉಪಯೋಗವಿಲ್ಲ. ಇನ್ನಾದರೂ ಸಂಬಂಧಪಟ್ಟವರು ಇದರ ರಿಪೇರಿ ಮಾಡಿಯಾರೆ ಎಂದು ಈ ಭಾಗದ ಜನ ಕಾಯುತ್ತಿದ್ದಾರೆ.

-ಹೆಚ್. ವಿ. ಶಿವಪ್ಪ,
ಮರ್ಕಲ್ ಪಂಚಾಯ್ತಿ ಸದಸ್ಯ, ತೆಸ್ತ್ರ ಇತು.

"ಸೇತುವೆ ಕೈಹಿಡಿ ಉದುರಿಹೋಗಿದೆ"

ಮಾನ್ಯರೆ,

ಕಿಗ್ಗದ ಸಮೀಪ ಹರಿಯುವ ನಂದಿನಿ ಹೊಳೆಗೆ ಬಹಳ ಹಿಂದಿನ ಕಾಲದ, ಕಿರಿದಾದ ಒಂದು ಸೇತುವೆ ಇದ್ದು ಇದು ಈಗ ಬಹಳ ಅಪಾಯಕಾರಿ ಘಟ್ಟದಲ್ಲಿದೆ. ಇದರ ಕೈಪಿಡಿಗಳೆಲ್ಲವೂ ಬಿದ್ದುಹೋಗಿವೆ. ಸೇತುವೆಯ ತುದಿಯಲ್ಲಿ ವಾಹನಗಳು ನೆಗೆಯುವುದರಿಂದ ಬ್ರೇಕುಗಳಿಲ್ಲದ ವಾಹನಗಳಾದರೆ ಕೂತವರು ಹೊಳೆಗೆ ಬೀಳಬಹುದು. ಈಗಾಗಲೇ ಕೆಲವಾರು ಜನ ಈ ಸೇತುವೆಯಲ್ಲಿ ಅಪಾಯಕ್ಕೀಡಾಗಿದ್ದಾರೆ. ರಾತ್ರಿ ಸೈಕಲ್ಲಿನಲ್ಲಿ ಬರುತ್ತಿದ್ದ ಒಬ್ಬ ವ್ಯಕ್ತಿ ಹೊಳೆಗೆ ಬಿದ್ದಿದ್ದ. ಅದೃಷ್ಟವಶಾತ್ ನೀರಿಗೇ ಬಿದ್ದುದರಿಂದ ಅಪಾಯವಾಗದೇ ಉಳಿದಿದ್ದ. ನಂತರ ಒಂದು ಎತ್ತು ಸೇತುವೆಯಿಂದ ಹೊಳೆಗೆ ಬಿದ್ದಿತ್ತು.
ಸಮೀಪವೇ ಇರುವ ಎಣ್ಣೆ ಅಂಗಡಿಗೆ ಭೇಟಿ ಕೊಟ್ಟ ರಕ್ತಿ ಅಳಿಯುವವರಿಗಂತೂ ಇದು ಮೃತ್ಯುಬಾಗಿಲು.

ಆದುದರಿಂದ ಈ ಸೇತುವೆಯಿಂದಾಗಬಹುದಾದ ಅನಾಹುತಗಳನ್ನು ತಪ್ಪಿಸಲು ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಇದರ ದುರಸ್ತಿ ಕಾರ್ಯಕೈಗೊಳ್ಳಲೆಂದು ವಿನಂತಿ. ಜೊತೆಗೆ ಇದೇ ಎಚ್ಚರಿಕೆ ಕೂಡ ಆಗಿದೆ.

-ವಾಸುದೇವ ಎಸ್. ಪ್ರಭು, ಕಿಗ್ಗ.

ಗಜಮುಖನ ಸುಲಿಗೆ

(೨ನೇ ಪುಟದಿಂದ)

ಎಂಟು ಹತ್ತು ದಿನಗಳವರೆಗೆ ಪ್ರದರ್ಶಿಸಲ್ಪಡುವ ನನಗೆ ಅವರು ನೀಡುವ ಸತ್ಕಾರವೋ ....ಶಿವ ಶಿವಾ....!! ಅಷ್ಟು ದಿನಗಳವರೆಗೆ ವಿದ್ಯುತ್ ದೀಪಗಳಿಂದ ಅಲಂಕರಿಸಲ್ಪಟ್ಟ ವೇದಿಕೆಯಲ್ಲಿ ಕೂರಿಸಿ ಕರ್ಣ ಕಠೋರವಾದ ಕಾರ್ಯಕ್ರಮವನ್ನಿಟ್ಟು ನನ್ನ ಅನೆಕಿವಿಯೂ ಕಳಚಿ ಬೀಳುವ ಪರಿಸ್ಥಿತಿ ಬಂದಿದೆ. ಇನ್ನು ಆ ಪ್ರಸಾದವೋ! ಆ ಕೋವಿ ಮದ್ದನ್ನು (ಗನ್ ಪೌಡರ್ ಎಂದೇ ಪ್ರಸಿದ್ಧಿ) ತಿಂದು ಗಂಟಲು ಕಟ್ಟುವ ಪರಿಸ್ಥಿತಿ.
ಇನ್ನೂ ನಾನು ಹೀಗೇ ಹೇಳುತ್ತಾ ಹೋದರೆ ನನಗೂ ಬೆದರಿಕೆ ಹಾಕಿ ಓಡಿಸಿಯೇ ಬಿಟ್ಟಾರು!!

ಇತಿ ಆಶೀರ್ವಾದಗಳೊಂದಿಗೆ,

ನಿನ್ನವನೇ ಆದ, **ಗಜಮುಖ.**

ಬೇಗಾನೆಯವರಿಗೆ...

(೨ನೇ ಪುಟದಿಂದ)

ಎಷ್ಟು ಅವಶ್ಯಕ ಎಂದು ನಿಮಗೆ ಬಿಡಿಸಿ ಹೇಳಬೇಕಾಗಿಲ್ಲ. ನನ್ನ ಈ ಪತ್ರವು 'ಮುಂಜಾವು'ನಲ್ಲಿ ಪ್ರಕಟವಾದರೆ, ಅದರ ಒಂದು ಪ್ರತಿಯನ್ನು ಕೊಂಡು ನಿಮಗೆ ಕಳಿಸುವ ಜವಾಬ್ದಾರಿ ನನ್ನದು. ನೀವು ಮಾತ್ರ ಬೇಕಾದ್ದಕ್ಕೆ: 'ನೋಡೋಣ', 'ಮುಂದೆ ನೋಡೋಣ', ಇತ್ಯಾದಿ ಹಾರಿಕೆಯ ಉತ್ತರ ಕೊಡದೆ, ನೇರವಾಗಿ 'ಹೌದು' ಅಥವಾ 'ಇಲ್ಲ' ಎಂದು ಉತ್ತರ ಕೊಡುವುದು.

-ಹೆಚ್. ಸುಂದರರಾವ್,
ನೇರವ ಮುದ್ರಣ, ಕೊಪ್ಪ.

ನಾಗಲಾಪುರ ನೆರೆ ಸಂತ್ರಸ್ತರಿಗೆ

ವಿಭಾಗಾಧಿಕಾರಿಗಳಿಂದ ವಿಶೇಷ ನೆರವು

ನಾಗಲಾಪುರ: ಆ. ೧೮ ರ ನೆರೆ ಹಾವಳಿಯನ್ನು ಪರಿಶೀಲಿಸಲು ಇಲ್ಲಿಗೆ ಭೇಟಿಕೊಟ್ಟಿದ್ದ ವಿಭಾಗಾಧಿಕಾರಿ ಎಂ. ಬಿ. ಪ್ರಕಾಶ್ ರವರು, ಮನೆ ಕಳೆದುಕೊಂಡ ಏಳು ಜನರಿಗೆ ವಿಶೇಷ ಪರಿಹಾರವನ್ನು ಸ್ಥಳದಲ್ಲೇ ಮಂಜೂರು ಮಾಡಿದ್ದಾರೆ. ಅದರಂತೆ ಅವರೆಲ್ಲರಿಗೂ ತಲಾ ೪ ಸಾವಿರ ರೂ. ವೆಚ್ಚದಲ್ಲಿ ಹುಡ್ಕೊ ಯೋಜನೆಯಲ್ಲಿ ಪೂರ್ತಿ ಮನೆ ಕಟ್ಟಿಸಿಕೊಡಲಾಗುವುದು.

ಈ ಬಗ್ಗೆ ಸರ್ಕಾರದ ಗಲಂಟ್ ಬಂದಿದ್ದು ಮಳೆ ಹಿಂದಾದ ಕೂಡಲೇ ಕೆಲಸ ಆರಂಭವಾಗುವುದೆಂದು ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ. ಬಾಲಣ್ಣ ಗೌಡ ತಿಳಿಸಿದ್ದಾರೆ.
ಬೇಕಾಗುವುದು.

ಈ ಕೆಲಸವನ್ನು ತುರ್ತಾಗಿ ಮತ್ತು ಸಮರ್ಪಕವಾಗಿ ಮಾಡಿಕೊಡುವಂತೆ ಅವರು ಸ್ಥಳೀಯ ಅಧಿಕಾರಿಗಳಿಗೆ ಆದೇಶಿಸಿದ್ದಾರೆಂದು ತಿಳಿದುಬಂದಿದೆ.

ಸಂಕ್ಷಿಪ್ತ ಸುದ್ದಿ

ಅಂಗನವಾಡಿಗೆ ಬೋರಯ್ಯ ಯೋಜನಾಧಿಕಾರಿ

ಕೊಪ್ಪ: ಜಿಲ್ಲೆಯಲ್ಲಿ ಕೊಪ್ಪ ತಾ|| ಗೆ ಮಾತ್ರ ಮಂಜೂರಾಗಿರುವ, ೧೨ ಲಕ್ಷ ರೂ ವೆಚ್ಚದ ಶಿಶು ಮತ್ತು ಮಹಿಳಾ ಕಲ್ಯಾಣ ಯೋಜನೆಯಾದ 'ಅಂಗನವಾಡಿ'ಗೆ ತಾ|| ಯೋಜನಾಧಿಕಾರಿಯಾಗಿ ಬೋರಯ್ಯ ಎಂಬವರು ನೇಮಕವಾಗಿದ್ದಾರೆ. ಸದ್ಯದಲ್ಲೇ ಕಾರ್ಯಾರಂಭವಾಗಲಿರುವ ಇದರಿಂದ ೧೨೦ ಗ್ರಾಮಗಳಿಗೆ ಪ್ರಯೋಜನ ದೊರೆಯುತ್ತದೆಂದು ತಾ. ಅ. ಮಂ. ಅಧ್ಯಕ್ಷ ಬಿ.ಜಿ. ಚಿದಂಬರ್ ತಿಳಿಸಿದ್ದಾರೆ.

ಅಗತ್ಯ ವಸ್ತುಗಳ ಕಾಯಿದೆ ಅನ್ವಯ ಮೊಕದ್ದಮೆ

ಶೃಂಗೇರಿ: ನ್ಯಾಯಬೆಲೆಯ ಫಲಕ ತೂಗುಹಾಕಿಲ್ಲ ಹಾಗೂ ಸ್ಟಾಕ್ ರಿಜಿಸ್ಟರ್ ಇಟ್ಟಿಲ್ಲ ಎಂಬ ಕಾರಣಕ್ಕಾಗಿ ಆ. ೨೪ ರಂದು ಇಲ್ಲಿನ ಐವರು ಪ್ರಮುಖ ವರ್ತಕರ ವಿರುದ್ಧ ಪೋಲೀಸರು ಅಗತ್ಯ ವಸ್ತುಗಳ ಕಾಯಿದೆಯ ಅನ್ವಯ ಸಾಧಾರಣ ಮೊಕದ್ದಮೆಗಳನ್ನು ಹೂಡಿದ್ದಾರೆ.

ಕಿರಿಯ ಕಾಲೇಜು ಪ್ರಿನ್ಸಿಪಾಲರ ಸ್ಪಷ್ಟನೆ

ಕೊಪ್ಪ: ಇಲ್ಲಿನ 'ಕಿರಿಯ ಕಾಲೇಜಿನ ವಿಜ್ಞಾನ ವಿಭಾಗ ದಿವಾಳಿ!?' ಎಂಬ ನಮ್ಮ ವರದಿಗೆ (ಆ. ೨೨) ಸ್ಪಷ್ಟೀಕರಣ ನೀಡಿರುವ ಪ್ರಿನ್ಸಿಪಾಲರು, ಈ ವರ್ಷ ೨ನೇ ಪಿ ಯು ಸಿಯಲ್ಲಿದ್ದುದು ೧೫ ಜನ ಮಾತ್ರ ಎಂದು ತಿಳಿಸಿದ್ದಾರೆ. (೩೫ ಎಂದು ವರದಿಯಾಗಿತ್ತು)

ಇಲ್ಲಿನ ಪ್ರ. ದ. ಕಾಲೇಜಿನಲ್ಲಿ ಸಂಸ್ಕೃತ ಉಪಾಧ್ಯಾಯ ಹುದ್ದೆಯನ್ನು ಮಂಜೂರು ಮಾಡದೆ ಇರುವುದರಿಂದ ಪಿ ಯು ಸಿಯಲ್ಲಿ ಸಂಸ್ಕೃತ ತೆಗೆದುಕೊಂಡಿದ್ದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎಂದು ತಿಳಿದು ಬಂದಿದೆ.

ಸ್ವಾತಂತ್ರ್ಯೋತ್ಸವ

ಕುಪ್ಪನ ಮಕ್ಕಿ

ಇಲ್ಲಿನ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕರಡಿಗದ್ದೆ ರಾಮಣ್ಣ ಗೌಡರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಸಂಪತ್ ಕುಮಾರ್ ಧ್ವಜಾರೋಹಣ ಮಾಡಿದರು. ಅಧ್ಯಾಪಕ ಬಿ. ವಿ. ಚಿನ್ನಯ್ಯ ನವರು ಸ್ವಾಗತಿಸಿ ವಂದಿಸಿದರು. ಮಕ್ಕಳಿಗೆ ಈ ಸಂದರ್ಭದಲ್ಲಿ ಸಿಹಿ ಹಂಚಲಾಯಿತು.

ಬೇಗಾರು ಹಿ||ಪ್ರಾ|| ಶಾಲೆ

ಭಾರತದ ೩೬ನೇ ಸ್ವಾತಂತ್ರ್ಯೋತ್ಸವವನ್ನು ಇಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಕುಂಬರಕೋಡು ಚಂದ್ರಶೇಖರರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಸ್ಥಳೀಯ ಪಶು ವೈದ್ಯ ಎಸ್. ವಾಸುದೇವರಾಯರು ಧ್ವಜಾರೋಹಣ ಮಾಡಿದರು.

ಮಕ್ಕಳ ಪಥಸಂಚಲನ ಹಾಗೂ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ಈ ಸಂದರ್ಭದಲ್ಲಿ ಜರುಗಿದವು. ಮುಖ್ಯೋಪಾಧ್ಯಾಯ ಎಲ್ ತಿಮ್ಮಣ್ಣ ಗೌಡ ಸ್ವಾಗತಿಸಿ ವಂದಿಸಿದರು.

ಕಿಗ್ಗ

ಇಲ್ಲನ ಪ್ರಾಥಮಿಕ ಶಾಲೆಯವರು ಮತ್ತು ಶಾಂತಾ ಶಿಶು ವಿಹಾರದವರು ಜಂಟಿಯಾಗಿ ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸಿದರು. ಸಿರಿಮನೆ ಸುಬ್ಬರಾವ್ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಪಿ. ಕೆ. ಕೆ. ಪುದುವಾಳ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಶಾಲಾ ಮುಖ್ಯೋಪಾಧ್ಯಾಯರು ಧ್ವಜಾರೋಹಣ ಮಾಡಿದರು. ಊರಿನ ಗಣ್ಯರನೇಕರು ಸ್ವಾತಂತ್ರ್ಯದ ಬಗ್ಗೆ ಸಭೆಯಲ್ಲಿ ಮಾತನಾಡಿದರು.

ಶಾಲಾ ಉಪಾಧ್ಯಾಯರು ಸ್ವಾಗತ, ವಂದನಾರ್ಪಣೆ ಮಾಡಿದರು.

ವಿದ್ಯಾರ್ಥಿನಿ ಸಂಘ ಉದ್ಘಾಟನೆ

ಶೃಂಗೇರಿ: ಇಲ್ಲಿನ ಜ.ಅ.ವಿ. ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿನಿ ಸಂಘದ ಉದ್ಘಾಟನೆಯು ಪುರಸಭಾ ಸದಸ್ಯ ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ನಟರಾಜ ಐಯ್ಯರ್ ರವರು 'ವಿದ್ಯಾರ್ಥಿನಿಯರ ಪಠ್ಯೇತರ ಚಟುವಟಿಕೆಗಳು ಸರ್ವತೋಮುಖವಾದ ಯಶಸ್ಸಿಗೆ ಕಾರಣವಾಗುತ್ತವೆ' ಎಂದರು.

ಕಾರ್ಯಕ್ರಮದಲ್ಲಿ ಕು|| ಕವಿತಾರಿಂದ ಸಂಘದ ಸಂಕ್ಷಿಪ್ತ ವರದಿ, ಕು||ಸಾವಿತ್ರಿಯವರಿಂದ ಉದ್ಘಾಟನೆ, ಕು|| ಉಮಾರವರಿಂದ ಪ್ರಮಾಣವಚನ ಬೋಧನೆ ನಡೆಯಿತು.

ಇದೇ ಸಂದರ್ಭದಲ್ಲಿ ವಿ. ಹಿ. ಪರಿಷತ್ ಏರ್ಪಡಿಸಿದ ರಾಮಾಯಣ, ಮಹಾಭಾರತ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಕು|| ಪದ್ಮಾವತಿ ಯವರಿಗೆ ವಿಶ್ವನಾಥ ಭಟ್ಟರು ರಜತ ಪದಕ ನೀಡಿದರು.

ಕು|| ವಾಣಿ ಆಧ್ಯಾ ಸ್ವಾಗತಿಸಿದರು. ಕು|| ಭಾರತಿ ವಂದಿಸಿದರು.

ವಯಸ್ಕರ ಶಿಕ್ಷಣ ಕೇಂದ್ರಗಳ ಉಪಾಧ್ಯಾಯರ ತರಬೇತಿ ಶಿಬಿರ

ತೀರ್ಥಹಳ್ಳಿ ತಾಲ್ಲೂಕು ವಯಸ್ಕರ ಶಿಕ್ಷಣ ಕೇಂದ್ರಗಳ ಉಪಾಧ್ಯಾಯರ ತರಬೇತಿ ಶಿಬಿರದ ಮುಕ್ತಾಯ ಸಮಾರಂಭವು ತಾ||ಅ||ಮಂ|| ಸಭಾಂಗಣದಲ್ಲಿ, ಶಾಸಕ ಕಡಿದಾಳ್ ದಿವಾಕರ್ ಅವರ ಅಧ್ಯಕ್ಷತೆಯಲ್ಲಿ ಆಗಸ್ಟ್ ೨೦ ರಂದು ನಡೆಯಿತು. ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಿ.ಆರ್. ಸಿ. ಗೌಡ, ಸಾಹಿತಿ ವೈ.ಕೆ. ತಿಮ್ಮಗಸಯ್ಯ ಮತ್ತು ಛಲಗಾರದ ಸಂಪಾದಕ ಎ. ಎಸ್. ಗಣಪತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಈ ಸಭೆಯಲ್ಲಿ ತಾ||ಅ||ಮಂ||ಅಧ್ಯಕ್ಷ ಮಂಜಪ್ಪಗೌಡ ಸಮಾರೋಪ ಭಾಷಣ ಮಾಡಿದರು.

ಸಭೆಯಲ್ಲಿ ಕು| ಗಾಯಿತ್ರಿ ಪ್ರಾರ್ಥಿಸಿದರು. ಶ್ರೀಕಂಠೇಗೌಡ ಶಿಬಿರದ ವರದಿ ಓದಿದರು. ಸಿದ್ದಪ್ಪಗೌಡ ಸ್ವಾಗತಿಸಿ ಶ್ರೀಕಂಠೇಗೌಡ ವಂದಿಸಿದರು.

ಮೂರು ಕಾರು ಕದಿಯುವ ಯತ್ನ ವಿಫಲ

ಬಾಳೆಹೊನ್ನೂರು: ಆ. ೨೫ರಂದು ಇಲ್ಲಿ ಕಾರುಗಳನ್ನು ಕದಿಯಲು ಯತ್ನಿಸಿ ವಿಫಲವಾದ ಘಟನೆ ವರದಿಯಾಗಿದೆ.

ನ.ರಾ.ಪುರ ತಾ| ಅ| ಮಂಡಳಿ ಅಧ್ಯಕ್ಷ ಕೆ.ಟಿ. ಚಿನ್ನಯ್ಯ ಗೌಡರ ಕಾರು ಕದ್ದು ಸ್ವಲ್ಪ ದೂರ ಚಲಿಸುವುದರಲ್ಲಿ ಸೇವಕನಿಗೆ ಎಚ್ಚರವಾಗಿ ಕಳ್ಳ ಪರಾರಿ. ನಂತರ ಮಹಾಲಸ ಆಟೋಮೊಬೈಲ್ಸ್ ರವರ ಕಾರನ್ನು ಸ್ವಲ್ಪ ದೂರ ಒಯ್ದರೂ ಇಂಜಿನ್ ಬೀಗ ಇದ್ದುದರಿಂದ ಚಾಲನೆ ಕೊಡಲಾಗದೆ ವಿಫಲ. ಆದರೆ ಅಂದೇ ಜೋಡಿಸಿದ್ದ ಹೊಸ ಟೇಪ್ ರೆಕಾರ್ಡರ್ ಕಳವು. ವಾಮನ ಪೈಯವರ ಕಾರನ್ನು ಕದ್ದು ಸ್ವಲ್ಪದೂರ ಹೋಗುವುದರಲ್ಲಿ ಅರಣ್ಯ ಇಲಾಖೆಯ ಗೋಡೆಗೆ ಬಡಿದು ಕಾರು ನಿಂತಿತು. ಅಂತೂ ಮೂರು ಯತ್ನದಲ್ಲಿ ಒಂದೂ ಗಿಟ್ಟಲಿಲ್ಲ.

ಯಾರನ್ನಾದರೂ ಬಂಧಿಸಲಾಗಿದೆಯೆ? ಎಂಬ ಬಗ್ಗೆ ವಿವರ ದೊರೆತಿಲ್ಲ.

ಹಳ್ಳಿಗೆ ಬಂದ ಹಗಲುಗಳ್ಳ

ಬಿದರಗೋಡು: ಇಲ್ಲಿಗೆ ಸಮೀಪದ ಮುದ್ದಿನಹಳ್ಳಿನ ಸಿದ್ದೇಗೌಡರ ಮನೆಯಲ್ಲಿ ಬೆಳಿಗ್ಗೆ ೧೨-೩೦ ರ ಸಮಯದಲ್ಲಿ ಸುಮಾರು ೧೩೦೦ ರೂ ಬೆಲೆಬಾಳುವ ಒಡವೆ, ಬಟ್ಟೆ ಇತ್ಯಾದಿಗಳು ಕಳುವಾದ ಘಟನೆಯೊಂದು ಗೊತ್ತಾಗಿದೆ.

ಈ ಅಪಹರಣ ಆ. ೧೩ ರಂದು ನಡೆದಿದ್ದು ಬಾಬು ಆಲಿಯಾಸ್ ಅಶೋಕನೆಂಬುವನು ಅಪಹರಣಕಾರನೆಂದು ಶಂಕಿಸಲಾಗಿದೆ. ಈತನ ಅಣ್ಣನಾದ ಜನಾರ್ದನ ಎಂಬುವವನನ್ನು ಶೃಂಗೇರಿ ಪೋಲೀಸರು ಬಂಧಿಸಿ ಆಪಾದಿತನನ್ನು ಹುಡುಕುತ್ತಿದ್ದಾರೆ.

ಒಡವೆಗಳನ್ನಿಟ್ಟ ಪೆಟ್ಟಿಗೆ ಸಮೀಪದಲ್ಲೇ ಸಿಕ್ಕಿರುವುದಾಗಿ ತಿಳಿದುಬಂದಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ಧೀವಟಗೆ ಅಚ್ಚುಕೂಟ, ಕೊಪ್ಪ.

ಚಾವಲ್ಮನೆ ಗ್ರಾಮ ಪಂಚಾಯ್ತಿ, ಕಮ್ಮರಡಿ

ಗಾಳಿ ಮರಗಳು ಹರಾಜಿಗಿರುತ್ತೆ. ಆಸಕ್ತಿ ಉಳ್ಳವರು ಪಂಚಾಯ್ತಿ ಕಚೇರಿ ವೇಳೆಯಲ್ಲಿ ಸಂಬಂಧಪಟ್ಟವರನ್ನು ಸಂಪರ್ಕಿಸಿ ಮರಗಳನ್ನು ಪರೀಕ್ಷಿಸಬಹುದು. ಹರಾಜಿನ ದಿನಾಂಕವನ್ನು ಮುಂದೆ ತಿಳಿಸಲಾಗುತ್ತದೆ.

ಅಧ್ಯಕ್ಷರು ಮತ್ತು ಸದಸ್ಯರು
ಚಾವಲ್ಮನೆ ಗ್ರಾಮ ಪಂಚಾಯ್ತಿ,
ಕಮ್ಮರಡಿ